"ಸಿನಿಮಾದಲ್ಲಿ ಹಾಡುವುದಾದರೆ ಇನ್ನು ಮೇಲೆ ನನ್ನ ತಂಬೂರಿಯನ್ನು ಮುಟ್ಟಬೇಡ" ಎಂದು ತಾಕೀತು ಮಾಡಿದರು.

ಕಿಶೋರಿಯವರನ್ನು ಹೀಗೆ ಮತ್ತು ಇಷ್ಟೇ ಎಂದು ಸರಳಗೊಳಿಸಿ ವರ್ಣಿಸುವುದು ತುಂಬಾ ಕಷ್ಟ. ಅವರೊಳಗೆ ಅಪಾರ ವೈವಿಧ್ಯತೆಯಿತ್ತು. ಅಮೂರ್ತತೆಯನ್ನು ತುಂಬಾ ಇಷ್ಟಪಡುತ್ತಿದ್ದರು, ವಿಭಿನ್ನ ಚಿಂತನೆಗಳನ್ನು ಸೊಗಸಾಗಿ ಒತ್ತಟ್ಟಿಗೆ ನೋಡುವುದಕ್ಕೆ ಅವರಿಗೆ ಸಾಧ್ಯವಾಗುತ್ತಿತ್ತು. ವಿಜ್ಞಾನದ ವಿದ್ಯಾರ್ಥಿಯಾಗಿ ಎಲ್ಲದರಲ್ಲೂ ವೈಜ್ಞಾನಿಕ ಕುತೂಹಲ ತೋರುತ್ತಿದ್ದರಂತೆ. ಅಷ್ಟೇ ಅಲ್ಲ, ಕಲೆಯನ್ನು ಹಾಗೂ ಕಲೆಯ ಸೃಷ್ಟಿಯನ್ನು ಕುರಿತ ಪ್ರಾಚೀನ ಹಾಗೂ ಆಧುನಿಕ ಸಿದ್ಧಾಂತಗಳನ್ನು ತೀರಾ ವೈಜ್ಞಾನಿಕವಾಗಿ ಗ್ರಹಿಸುವುದಕ್ಕೆ ಅವರಿಗಾಗುತ್ತಿತ್ತು. ಹಾಗೆಯೇ ನಾವು ಮೂಢನಂಬಿಕೆ ಎಂದು ತಳ್ಳಿಹಾಕಿಬಿಡಬಹುದಾದ ಎಷ್ಟೋ ವಿಚಾರಗಳನ್ನು ಆಳವಾಗಿ ನಂಬಿಕೊಂಡಿದ್ದರು. ಗುರು ರಾಘವೇಂದ್ರನಲ್ಲಿ ಮಗುವಿನಂತಹ ನಂಬಿಕೆ ಇಟ್ಟುಕೊಂಡಿದ್ದರು. "ನನಗೆ ಮಗುವಿನ ಹಾಗೆ ಇರೋದಕ್ಕೆ ತುಂಬಾ ಇಷ್ಟ. ನಾನು ಮಗುವಿನಷ್ಟೆ ಮೂರ್ಖಳು ಹಾಗು ಹಟಮಾರಿ. ಆದರೆ, ನನಗೆ ಅದು ತುಂಬಾ ಮುಖ್ಯವಾದ ಸ್ಥಿತಿ. ಆದರೆ ಕಲೆಯ ವಿಷಯಕ್ಕೆ ಬಂದಾಗ ನಾನು ಮಗುವಲ್ಲ" ಎನ್ನುತ್ತಿದ್ದರು.

ಕಿಶೋರಿ ತುಂಬಾ ಓದುತ್ತಿದ್ದರು. ಜ್ಞಾನ ಎನ್ನುವುದು ಕೇವಲ ಪುಸ್ತಕ ಅಥವಾ ಪ್ರಯೋಗಾಲಯದ ಬಂದಿಯಲ್ಲ ಎನ್ನುತ್ತಿದ್ದರು. ಬೇಕಾದ ಪುಸ್ತಕಕ್ಕಾಗಿ ಅವರು ಸಿಕ್ಕ ಸಿಕ್ಕ ಅಂಗಡಿ, ಗ್ರಂಥಾಲಯಗಳಿಗೆ ಅಲೆಯುತ್ತಿದ್ದರು. ಡಾ. ಪಾಂಡೆಯವರ 'ಇಂಡಿಯನ್ ಏಸ್ತೆಟಿಕ್ಸ್' ಪುಸ್ತಕಕ್ಕೆ ಹುಡುಕಾಡಿದ್ದನ್ನು ಹಲವರು ನೆನಪಿಸಿಕೊಳ್ಳುತ್ತಾರೆ. ಅವರ ಮನೆಯಲ್ಲಿ ಒಂದು ದೊಡ್ಡ ಗ್ರಂಥಾಲಯವೇ ಇದೆಯಂತೆ. ಬೆಳಗ್ಗೆ ಬೇಗ ಎದ್ದು ನಿಷ್ಠಾವಂತ ವಿದ್ಯಾರ್ಥಿಯಂತೆ ತಮ್ಮ ಮೆಚ್ಚಿನ ಪುಸ್ತಕಗಳನ್ನು ಓದುತ್ತಾ, ಅವುಗಳನ್ನು ಅರ್ಥೈಸಿ, ವ್ಯಾಖ್ಯಾನಿಸುತ್ತಾ ಕೂರುತ್ತಿದ್ದರು. ನಂತರ ಅಡುಗೆ ಮನೆಯಲ್ಲಿ ಒಂದಿಷ್ಟು ಕೆಲಸ ಮಾಡಿದ ನಂತರ ಸಂಗೀತದ ಸ್ವರಗಳೊಂದಿಗಿನ ಅವರ ಜೀವನ ಪ್ರಾರಂಭವಾಗುತ್ತಿತ್ತು. ಪದಗಳೊಂದಿಗಿನ ಒಡನಾಟದಿಂದ ಸರೆಗಮ ಜಗತ್ತಿಗೆ ಅವರ ಪ್ರಯಾಣ ತಂಬೂರದ ಮೇಲೆ ಬೆರಳು ಒಂದು ತಂತಿಯಿಂದ ಇನ್ನೊಂದಕ್ಕೆ ಹೋಗುವಷ್ಟೆ ಸಲೀಸಾಗಿ ನಡೆದುಹೋಗುತ್ತಿತ್ತು.

ಧ್ಯಾನೇಶ್ವರ, ತುಕಾರಾಂ, ಮೀರಾ ಇವರೆಲ್ಲಾ ಅವರ ಸಂಗೀತದ ಒಡನಾಡಿಗಳಾಗಿದ್ದರೆ, ಭರತ ಮುನಿ, ಸಾರಂಗದೇವ, ನಾರದ ಇವರೆಲ್ಲಾ ಅವರ ಚಿಂತನಾ ಲೋಕದ ಸಂಗಾತಿಗಳಾಗಿದ್ದರು. ಇಬ್ಬರ ಒಡನಾಟವೂ ಅವರಿಗೆ ಸಂತೋಷದಾಯಕವಾಗಿತ್ತು. ಸೊಗಸಾಗಿ ಮಾತನಾಡುತ್ತಿದ್ದರು. "ಎಲ್ಲವನ್ನೂ ಅಷ್ಟು ಚೆನ್ನಾಗಿ ಮಾಡಬೇಕೇ? ಬೇರೆಯವರಿಗೆ ಮಾಡುವುದಕ್ಕೆ ಏನು ಉಳಿಸುವುದಿಲ್ಲವೇ?" ಎಂದು ಜನ ಅವರನ್ನು ಕೇಳಿದ್ದೂ ಉಂಟು.

ಅವರಿಗೆ ಸಂಗೀತ ಎಂದಿಗೂ ಒಂದು ಮನರಂಜನೆ ಅಥವಾ ಭೋಗದ ವಸ್ತುವಾಗಿರಲಿಲ್ಲ. "ಸಂಗೀತ ಈಶ್ವರನನ್ನು ತಲುಪಲು ಒಂದು ಸಾಧನ, ಒಂದು ಮಾರ್ಗ. ಸ್ವರ ಎನ್ನುವುದು ಪರಮಾತ್ಮನ ಒಂದು ರೂಪ. ಹಾಡುವಾಗ ಇದು ನಮ್ಮ ಮನಸ್ಸಿನಲ್ಲಿ ಯಾವಾಗಲೂ ಇರಬೇಕು. ನಾನು ಜನರನ್ನು ಮೆಚ್ಚಿಸುವುದಕ್ಕೆ ಹಾಡುವುದಿಲ್ಲ. ಪರಮಾತ್ಮನಿಗಾಗಿ ಹಾಡುತ್ತೇನೆ. ಸಾಯುವ ಮೊದಲು ಅವನನ್ನು ನಾನು ಕಾಣಬೇಕು. ಹಾಗಾಗಿ ನಾನು ಹಾಡುವಾಗ ಕೇಳುಗರೇ ದೇವರಾಗಿ ಬಿಡುತ್ತಾರೆ. ನಾನು ಅವರ ಸೇವೆ ಮಾಡುತ್ತೇನೆ." ಎಂದವರು ಯಾವಾಗಲೂ ಹೇಳುತ್ತಿದ್ದರು. ಅವರು ಹಾಡುವಾಗ ಸಭಾಂಗಣ ದೇಗುಲವಾಗಿಬಿಡುತ್ತಿತ್ತು.